## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಾಲೂರು.

ದಿನಾಂಕ 22 ನೇ ಜುಲೈ - 2026

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 1942/2025**

ಫಿರ್ಯಾದುದಾರರುಃ ರಾಜ್ಯ ಪರಃ ಮಾಲೂರು ಪೊಲೀಸರು,

ವಿರುದ್ಧ

ಆರೋಪಿತರುಃ

1. ಸಿಕಂದರ, 26 ವರ್ಷ,
ಬಿನ್. ಲೇಟ್ ಅಬ್ದುಲ್,
ವಾಸಃ 1ನೇ ಅಡ್ಡರಸ್ತೆ, ರಾಜೀವ್ ನಗರ,
ಮಾಲೂರು ಟೌನ್.

2. ಸೈಪುಲ್ಲಾ ಷರೀಫ್, 24 ವರ್ಷ
ಬಿನ್ ಲೇಟ್ ರಹಮತುಲ್ಲಾ ಷರೀಪ್,
ವಾಸಃ ನೂರುಲ್ಲಾ ಬಿಲ್ಡಿಂಗ್, ಸಂಜಯ್
ಉರ್ದು ಸ್ಕೂಲ್, ಮಟನ್ ಮಾರ್ಕೆಟ್ ಹತ್ತಿರ,
ಮಾಲೂರು ಟೌನ್.

## :- ದೋಷಾರೋಪಣೆ :-

ಶ್ರೀ.ನಿತಿನ್ ಕುವೆಲೊ, ಬಿ.ಕಾಂ.,ಎಲ್.ಎಲ್.ಬಿ. 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ಮಾಲೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದಿನಾಂಕ 30.07.2024 ರಂದು ಮಧ್ಯಾಹ್ನ 1-00 ಗಂಟೆ ಸಮಯದಲ್ಲಿ ಚಾಸಾ-1(ಸಿದ್ದೇಶ್) ರವರು ಅವರ ಬಾಬ್ತು ಹಿರೋ ಹೊಂಡಾ ಸ್ಪ್ಲೆಂಡರ್ ದ್ವಿಚಕ್ರ ವಾಹನ ಸಂಖ್ಯೆ: ಕೆಎ-08-ಎಲ್-1165 ವಾಹನವನ್ನು ತಾಲ್ಲೂಕು ಕಛೇರಿ ಮುಂಭಾಗದಲ್ಲಿ ನಿಲ್ಲಿಸಿ, ತಾಲ್ಲೂಕು ಕಛೇರಿಯಲ್ಲಿ ಕೆಲಸ ಮುಗಿಸಿಕೊಂಡು ಪುನಃ ಮದ್ಯಾಹ್ನ 2-15 ಗಂಟೆಗೆ ವಾಪಸ್ಸು ಬಂದು ನೋಡಿದಾಗ, ಸದರಿ ಸ್ಥಳದಲ್ಲಿ ವಾಹನ ಇಲ್ಲದಿರುವುದನ್ನು ಕಂಡು ದೂರನ್ನು ನೀಡಿದ್ದು, ಆರೋಪಿತರಾದ ನೀವು ಸದರಿ ಚಾಸಾ-1 ರವರ ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ. ಆ

ಕಾರಣ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.303(2) ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಆಪಾದನೆಯನ್ನು ಮಾಡಿರುವುದರಿಂದ ನಾನು ಈ ಮೇಲಿನ ಆಪಾದನೆಯನ್ನು ನೀವು ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

*(ದಿನಾಂಕ 22.07.2026 ರಂದು ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

ದಿನಾಂಕಃ 22.07.2026
ಸ್ಥಳಃ ಮಾಲೂರು

Sd/-

(ನಿತಿನ್ ಕುವೆಲೊ)
**2** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಮಾಲೂರು.